# ಕೀಳರಿಮೆಯ ಕಾಯಿಲೆ

ವಾಲ್ಮೀಕಿ ರಾಮಾಯಣದಲ್ಲಿನ ಒಂದು ಸಂದರ್ಭ: ಸೀತಾನ್ವೇಷಣೆಗಾಗಿ ಅಂಗದನ ಮುಂದಾಳುತನದಲ್ಲಿ ಹೊರಟಿದ್ದ ಕಪಿಗಳ ಗುಂಪು ದಕ್ಷಿಣ ದಿಕ್ಕಿನಲ್ಲಿ ಸಂಚರಿಸುತ್ತಾ, ಬೇರೆ ಬೇರೆ ಅನುಭವಗಳಿಗೆ ತಮ್ಮನ್ನೊಡ್ಡಿಕೊಂಡು ವಿಂಧ್ಯ ಪರ್ವತಶ್ರೇಣಿಯ ಪ್ರಶ್ರವಣಗಿರಿಗೆ ಬಂದು ತಲುಪುತ್ತಾರೆ. ಅಲ್ಲಿ ಜಟಾಯುವಿನ ಸೋದರ ಸಂಪಾತಿಯಿಂದ ರಾವಣ ಸೀತೆಯನ್ನು ಲಂಕಾನಗರಿಯಲ್ಲಿ ಬಂಧಿಸಿಟ್ಟಿರುವ ವಿಚಾರ ತಿಳಿಯುತ್ತದೆ. ಆದರೆ ಲಂಕೆಯನ್ನು ಹೊಕ್ಕು, ಸೀತೆಯನ್ನು ಭೇಟಿಮಾಡಿ ಬರಬೇಕಾದರೆ ನೂರು ಯೋಜನ ದೂರ ಸಮುದ್ರವನ್ನು ಕ್ರಮಿಸಬೇಕಾಗಿದೆ. ಆಂಜನೇಯನನ್ನುಳಿದ ಎಲ್ಲ ಕಪಿಗಳೂ ಅಷ್ಟು ದೂರ ಸಮುದ್ರವನ್ನು ಲಂಘಿಸುವುದು ತಮ್ಮ ಶಕ್ತಿಗೆ ಮೀರಿದ್ದು ಎಂದು ನಿಟ್ಟುಸಿರು ಬಿಡುತ್ತಾರೆ. ಜಾಂಬವಂತನೂ ತನ್ನ ವೃದ್ಧಾಪ್ಯದಿಂದಾಗಿ ಅಷ್ಟೊಂದು ದೂರದ ಸಮುದ್ರ ಲಂಘನ ತನ್ನ ಕೈಲಾಗದು ಎನ್ನುತ್ತಾನೆ.

ಆಂಜನೇಯ ಮಾತ್ರ ಯಾವುದೇ ಮಾತಾಡದೇ, ಒಂಟಿಯಾಗಿ ಕುಳಿತು ಚಿಂತಿಸುತ್ತಿರುತ್ತಾನೆ. ಆತನಿಗೆ ಲಂಕೆಗೆ ಹೋಗಿ, ಸೀತೆಯನ್ನು ಕಂಡು ಅನಾಯಾಸವಾಗಿ ಹಿಂತಿರುಗಿ ಹಾರಿ ಬರುವ ಶಕ್ತಿಯಿದೆ. ಆದರೆ ಆತನಿಗೆ ತನ್ನ ಸಾಮರ್ಥ್ಯದ ಬಗ್ಗೆ ನಂಬಿಕೆಯಿಲ್ಲ. ತಾನು ಸುಗ್ರೀವ, ಅಂಗದ, ಜಾಂಬವಂತ ಮುಂತಾದವರಷ್ಟು ಸಮರ್ಥನಲ್ಲ ಎಂಬ ಕೀಳರಿಮೆ ಆತನನ್ನು ಕಾಡುತ್ತಿದೆ. ವೃದ್ಧನೂ, ಜ್ಞಾನಿಯೂ ಆದ ಜಾಂಬವಂತ ಆಂಜನೇಯನಿಗೆ ಆತನ ನಿಜವಾದ ಯೋಗ್ಯತೆಯನ್ನು ತಿಳಿಸಿ, ಎಚ್ಚರಿಸುತ್ತಾನೆ. 'ಬಲಂ ಬುದ್ಧಿಶ್ಚ ತೇಜಶ್ಚ ಸತ್ವಂಚ ಹರಿ ಪುಂಗವ! ವಿಶಿಷ್ಟಂ ಸರ್ವಭೂತೇಷು ಕಿಮಾತ್ಮಾನಂ ನ ಬುಧ್ಯಸೇ॥' (ಎಲೈ ವಾನರೋತ್ತಮ– ನಿನ್ನ ಬಲ, ನಿನ್ನ ಬುದ್ಧಿ, ನಿನ್ನ ತೇಜಸ್ಸು, ನಿನ್ನ ಧೈರ್ಯ ಎಲ್ಲವೂ ಈ ಪ್ರಪಂಚದಲ್ಲಿ ಸರ್ವಾಧಿಕವಾದುದು. ಆದರೂ ನಿನ್ನ ಮಹಿಮೆಯನ್ನು ನೀನೇ ತಿಳಿಯದಿರುವೆಯಲ್ಲ!) ಎಂದು ಛೇಡಿಸುತ್ತಾನೆ. ಆ ಮಾತನ್ನು ಕೇಳಿದ ಆಂಜನೇಯ ಮೈ ಕೊಡವಿ ಎದ್ದು, ಅತ್ಯಂತ ಆತ್ಮ ವಿಶ್ವಾಸದಿಂದ ಸಮುದ್ರ ಲಂಘನ ಮಾಡಿ, ಉದ್ದೇಶಿತ ಕಾರ್ಯದಲ್ಲಿ ಯಶಸ್ವಿಯಾಗುತ್ತಾನೆ.

ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ ಆಂಜನೇಯನಲ್ಲಿದ್ದ ಕೀಳರಿಮೆಯೇ ಆತನ ಕಾರ್ಯೋತ್ಸಾಹಕ್ಕೆ ಅಡ್ಡಿಯಾದುದು. ಜಾಂಬವಂತನ ಮಾತುಗಳಿಂದಾಗಿ ಆತನಿಗೆ ತನ್ನ ಸಾಮರ್ಥ್ಯದ ಅರಿವಾಗಿ ಆತ್ಮವಿಶ್ವಾಸ ಪುಟಿಯಲು ಕಾರಣವಾಯಿತು; ಸಾಧಾರಣ ಕಪಿಯಂತೆ ಯೋಚಿಸುತ್ತಿದ್ದ ಆಂಜನೇಯ 'ಧೀರ ಮಾರುತಿ'ಯಾಗಿ ಪರಿವರ್ತಿತನಾಗಲು ಸಾಧ್ಯವಾಯಿತು. ನಮ್ಮ ಸುತ್ತಲಿನ ಬಹಳಷ್ಟು ಮಂದಿ ಹೀಗೆಯೇ ಆತ್ಮ ವಿಶ್ವಾಸದ ಕೊರತೆಯಿಂದ ಬಳಲುತ್ತಿರುತ್ತಾರೆ. ಅಂಥವರು ತಮ್ಮಲ್ಲಿರುವ ಅಥವಾ ಇರಬಹುದೆಂದು ಭಾವಿಸಿರುವ ನ್ಯೂನತೆಗಳನ್ನೇ ಕುರಿತು ಸದಾ ಧ್ಯಾನಿಸುತ್ತಿರುತ್ತಾರೆ. ನಿಷೇಧಾತ್ಮಕ ಭಾವನೆಗಳೇ ಸದಾಕಾಲ ಅವರನ್ನು ಕಾಡುತ್ತಿರುತ್ತವೆ. ತಮ್ಮಲ್ಲಿ ಪ್ರಚ್ಛನ್ನವಾಗಿರುವ ಯೋಗ್ಯತೆ, ಸಾಮರ್ಥ್ಯಗಳ ಬಗ್ಗೆ ಗಮನ ಹರಿಸಿ, ಸಕಾರಾತ್ಮಕವಾಗಿ ಯೋಚಿಸುವುದು ಅಂಥವರಿಗೆ ಸಾಧ್ಯವಾಗುವುದಿಲ್ಲ.

ಇಂಥ ಕೀಳರಿಮೆಯಿಂದ ಬಳಲುವ ವ್ಯಕ್ತಿಗಳ ವರ್ತನೆಯಲ್ಲಿ ಸಾಧಾರಣವಾಗಿ ಎರಡು ಬಗೆಯ ಅತಿರೇಕಗಳನ್ನು ಗಮನಿಸಬಹುದು. ಅಂಥವರಲ್ಲಿ ಕೆಲವರು ತಮ್ಮಲ್ಲಿರುವ ಕುಂದು ಕೊರತೆಗಳನ್ನೇ ಕುರಿತು ಸದಾ ಚಿಂತಿಸುತ್ತಾ– ತಾವು ಕುರೂಪಿಗಳೆಂದೋ, ದಡ್ಡರೆಂದೋ, ನಿಷ್ಪ್ರಯೋಜಕರೆಂದೋ ತಮಗೆ ತಾವೇ ಹಣೆಪಟ್ಟಿ ಹಚ್ಚಿಕೊಳ್ಳುತ್ತಾರೆ. ಯಾವುದೇ ಕೆಲಸಕ್ಕೆ ಮುನ್ನುಗ್ಗುವ ಧೈರ್ಯ, ಉತ್ಸಾಹ ಅವರಲ್ಲಿರುವುದಿಲ್ಲ. ಅಂಥ ಪ್ರಸಂಗ ಬಂದಾಗ ಹೇಗೋ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಇನ್ನು ಕೆಲವರು ತಮ್ಮಲ್ಲಿನ ಕೀಳರಿಮೆಯನ್ನು ಮುಚ್ಚಿಡಲು ನಿರಂತರ ಹೋರಾಡುತ್ತಿರುತ್ತಾರೆ! ಸಂದರ್ಭ ಸಿಕ್ಕಾಗಲೆಲ್ಲಾ ಬಡಾಯಿ ಕೊಚ್ಚುವುದು, ತಮ್ಮಲ್ಲಿಲ್ಲದ ಗುಣ, ಯೋಗ್ಯತೆಗಳನ್ನು ಇವೆ ಎಂದು ಪ್ರದರ್ಶಿಸಲು ಹೆಣಗಾಡುವುದು ಅವರಲ್ಲಿರುವ ಕೀಳರಿಮೆಯ ಕಾರಣದಿಂದಲೇ.

ಅತಿಯಾದ ಸ್ವಪ್ರಶಂಸೆ, ಪರನಿಂದೆ, ಛಿದ್ರಾನ್ವೇಷಣಾ ಪ್ರವೃತ್ತಿ, ಆಕ್ರಮಣಕಾರೀ ಸ್ವಭಾವ, ಜಗಳಗಂಟೀತನ– ಇವೆಲ್ಲವೂ ವ್ಯಕ್ತಿಯಲ್ಲಿನ ಕೀಳರಿಮೆಯನ್ನು ಎತ್ತಿತೋರಿಸುತ್ತವೆ. ತನ್ನ ನೈಜ ಸ್ವರೂಪ ಇತರರಿಗೆ ತಿಳಿಯಬಾರದೆಂದು ಅಂಥ ವ್ಯಕ್ತಿ ಯಾವಾಗಲೂ ಮುಖವಾಡ ಧರಿಸಿಯೇ ಇರಲು ಯತ್ನಿಸುತ್ತಾನೆ.

ನಮಗೆ ಗೊತ್ತಿದ್ದೋ, ಗೊತ್ತಿಲ್ಲದೆಯೋ ನಮ್ಮೆಲ್ಲರಲ್ಲೂ ಒಂದು 'ಸ್ವಚಿತ್ರ' (Self image) ರೂಪುಗೊಂಡಿರುತ್ತದೆ. ನಾವು ಇತರರಿಗಿಂತ ಬುದ್ಧಿವಂತರು, ಜ್ಞಾನಿಗಳು, ಸ್ಫುರದ್ರೂಪಿಗಳು ಎಂದೋ, ನಾವು ತೀರಾ ದಡ್ಡರು, ಅಜ್ಞಾನಿಗಳು, ಕುರೂಪಿಗಳು ಎಂದೋ ಕಲ್ಪಿಸಿಕೊಂಡು, ಅದನ್ನೇ ನಿಜವೆಂದು ನಾವು ಭ್ರಮಿಸುತ್ತಿರುತ್ತೇವೆ. ಪ್ರತಿಯೊಬ್ಬ ವ್ಯಕ್ತಿಯಲ್ಲೂ ಇತ್ಯಾತ್ಮಕ ಹಾಗೂ ನೇತ್ಯಾತ್ಮಕ ಗುಣಗಳಿರುತ್ತವೆ– ಎಂಬ ಅರಿವಿನ ಬೆಳಕಿನಲ್ಲಿ ನಮ್ಮ ನಿಜವಾದ ವ್ಯಕ್ತಿತ್ವ ಎಂಥದೆಂಬುದನ್ನು ನಾವು ಕಂಡುಕೊಳ್ಳಬೇಕಾಗುತ್ತದೆ. ಕೀಳರಿಮೆಯ ರೋಗಕ್ಕೆ ಆತ್ಮಾವಲೋಕನ ಕ್ರಿಯೆಯೇ ಮದ್ದು. 'ಕಿಮಾತ್ಮಾನಂ ನ ಬುಧ್ಯಸೇ' (ನಿನ್ನ ಮಹಿಮೆಯನ್ನು ನೀನೇ ತಿಳಿಯದಿರುವೆಯಲ್ಲ!) ಎಂಬ ಮಾತು ನಮ್ಮನ್ನು ಎಚ್ಚರಿಸುತ್ತಿರಬೇಕು!

■ ವೈನತೇಯ

## ಮಾತೇ ಮುತ್ತು

★ ರಾಜಕೀಯದಲ್ಲಿ ಏನಾದರೂ ಮಾತನಾಡುವುದಿದ್ದರೆ ಪುರುಷನನ್ನು ಕೇಳಿ; ಏನಾದರೂ ಕೆಲಸ ಆಗಬೇಕಿದ್ದರೆ ಮಹಿಳೆಯನ್ನು ಕೇಳಿ.

–ಮಾರ್ಗರೆಟ್ ಥ್ಯಾಚರ್

★ ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ. ಯಾವುದಕ್ಕೂ ತುದಿಯಿಲ್ಲ, ಯಾವುದೂ ಎಲ್ಲಿಯೂ ನಿಲ್ಲುವುದೂ ಇಲ್ಲ. ಇಲ್ಲಿ ಅವಸರವೂ ಸಾವಧಾನದ ಬೆನ್ನೇರಿದೆ.

–ಕುವೆಂಪು

★ ಕಾನೂನಿಗಿಂತ ದೊಡ್ಡವನು ಎಂದು ನೀನು ಎಂದೂ ತಿಳಿಯಬೇಡ.

–ಥಾಮಸ್ ಫುಲರ್

★ ನೀನು ಹೆಚ್ಚು ಕಾಲ ಬದುಕಬೇಕೆಂದಿದ್ದರೆ, ನಿನ್ನ ಪ್ರಾರಂಭಿಕ ಇಪ್ಪತ್ತು ವರ್ಷ ತುಂಬ ಅಮೂಲ್ಯವಾದದ್ದು ಎಂಬುದು ನೆನಪಿರಲಿ.

–ಅರವಿಂದರು

★ ಅಸ್ಪೃಶ್ಯತೆ- ಜಾತೀಯತೆ ಹಿಂದೂಗಳಲ್ಲಿ ಸಮಾನತೆ ಬೆಳೆಯಲು ಅವಕಾಶ ಮಾಡಿಕೊಡಲಿಲ್ಲ. ಆದ್ದರಿಂದ ಹಿಂದೂ ಧರ್ಮವು ಒಂದು ಸಮಾನ ಧರ್ಮದ ಸಮುದಾಯವಾಗಲಿಲ್ಲ.

–ಬಿ.ಆರ್.ಅಂಬೇಡ್ಕರ್

★ ಜ್ಞಾನದ ಮೊದಲ ಕೆಲಸ ಅಸತ್ಯವನ್ನು ಕಂಡುಕೊಳ್ಳುವುದು, ಎರಡನೆಯದು ಸತ್ಯವನ್ನು ತಿಳಿಯುವುದು.

–ಕಬೀರ

★ ಸನ್ಯಾಸ ಹೃದಯದ ಒಂದು ಸ್ಥಿತಿಯ ಹೆಸರು. ಯಾವುದೇ ನಿಯಮ, ವೇಷಭೂಷಣ ಅಲ್ಲ.

–ಭಗವದ್ಗೀತೆ

★ ನಿನ್ನ ಆಸೆ, ಇಚ್ಛೆಗಳನ್ನು ದಮನಗೊಳಿಸುವುದು ಪುಣ್ಯ. ನಿರಪರಾಧಿಗಳನ್ನು ಸತಾಯಿಸುವುದು ಮಹಾಪಾಪ.

–ಭಗವಾನ್ ಮಹಾವೀರ

★ ಆಶಾವಾದಿ ಪ್ರತಿಯೊಂದು ಕಷ್ಟದಲ್ಲೂ ಸಂದರ್ಭವನ್ನು ಹುಡುಕುತ್ತಾನೆ. ಆದರೆ ನಿರಾಶಾವಾದಿ ಪ್ರತಿಯೊಂದು ಸುಸಂದರ್ಭದಲ್ಲಿ ಕಷ್ಟವನ್ನು ಹುಡುಕುತ್ತಾನೆ.

–ಅಜ್ಞಾತ

★ ಯಾರ ಹೃದಯ ಶುದ್ಧವಾಗಿದೆ ಅವನು ಧನ್ಯ. ಪರಮಾತ್ಮನ ಸಾಕ್ಷಾತ್ಕಾರ ಅವನಿಗೆ ಸುಲಭ.

–ಏಸುಕ್ರಿಸ್ತ

★ ಜಾತೀಯತೆ ಅಥವಾ ಪ್ರಭಾವವಳಿಯ ಲಾಭ ದೊರೆಯುವುದು ಸಿರಿವಂತರಿಗೇ ಹೊರತು, ಬಡವರಿಗಲ್ಲ; ಮಧ್ಯಮವರ್ಗದವರಿಗೂ ಅಲ್ಲ.

–ಅನುಭವಾಮೃತ

★ ನೀನು ಸತ್ತರೂ ಜನರು ನಿನ್ನನ್ನು ನೆನಪು ಮಾಡಿಕೊಳ್ಳಬೇಕೆಂದಿದ್ದರೆ, ಓದಲು ಯೋಗ್ಯವಾದುದನ್ನು ರಚಿಸು ಅಥವಾ ಪ್ರಶಂಸೆ ಮಾಡಲು ಆಗುವಂಥ ಕೆಲಸವನ್ನು ಮಾಡು.

–ಬೆಂಜಮಿನ್ ಫ್ರಾಂಕ್ಲಿನ್